ಮೈಸೂರ ಗೆಜೆಟ್ಟ.

ಸಂ. 44.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 24.

ಬೆಂಗಳೂರು, ಗುರುವಾರ, ಜೂನ್ ತಾ॥ 17, ಸ್ ೧೯೦೯.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ಇನಾಂ ಸೂಪರ್ಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಲೆಕ್ಟೋರವರು, ಪಬ್ಲಿಕ್ ವರ್ಕ್ಸ್ ಆಫೀಸರ್ಗಳು, ಫಾರೆಸ್ಟ್ ರೆಜಿಸ್ಟ್ರೇರ್ ವ ಎಡ್ಯುಕೇರ್ ಇನ್ಸ್ಪೆಕ್ಟರ್ ಜನರಲ್ರವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್ರರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜ್ರರು, ಪೋಲೀಸ್ ಸೂಪರ್ಟೆಂಡೆಂಟರು ಫಾರೆಸ್ಟ್ ಆಫೀಸರ್ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟಿಸ್ಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷ್ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ಇಸ್ತಿಹಾರ್ನಾಮೆ.

ತಾರೀಖು 31ನೆ ಮೇ 1909ನೆ ಇಸವಿ.

ನಂ. ರೆ. 10113—ವೈವಸಾಯ 175-08-15.

1908-09ನೆ ಕೀಲಕ ಸಾಲಿನ ಜಮಿಾನು ಕಂದಾಯವನ್ನು ರಿಮಿಾಷ್ ಮಾಡತಕ್ಕ ಮತ್ತು ವಸೂಲಾತಿಯನ್ನು ಕೆಲವುಕಾಲ ನಿಲ್ಲಿಸತಕ್ಕ ವಿಷಯದಲ್ಲಿ ಪುನರ್ವಿಮರ್ಶೆಮಾಡಿ ಸಾದರ್ಪಡಿರುವ ಇದರಡಿ ಕಂಡ 1909ನೆ ಇಸವಿ ಮೇ 30ನೆ ಮಿರ್ಕ್ಯಂನ ಕ್ಯಾಂಪು 20-30ನೆ ನಂಬರ್ ಸರ್ಕಾರಿ ಹುಕುಮಿನ್ನು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಫಾಯಿಷ್ಮಾಡಿ ಇರುತ್ತದೆ.

ಹುಕುಂ ಬಮೋಜೀಬ್,

ಕೆ. ಎಸ್. ಚಂದ್ರಶೇಖರ ಅಯ್ಯರ್,

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿ.

ಮೈಸೂರು ಶ್ರೀಮಂಮಹಾರಾಜಾ ಸಾಹೇಬ್ಬಹದರವರ ಸರ್ಕಾರಿ ಹುಕ್ಕುಂ.

1908-09ನೆ ಕೀಲಕ ಸಂವತ್ಸರದ ಜಮಿಾನು ಕಂದಾಯದ ಬಾಕಿಯನ್ನು ರಿಮಿಾಷ್ ಕೊಡತಕ್ಕ ವಿಷಯದಲ್ಲಿಯೂ ಅದನ್ನು ಕೆಲವು ಕಾಲವವರೆಗೆ ವಸೂಲ್ಮಾಡದೆ ನಿಲ್ಲಿಸತಕ್ಕ ವಿಷಯದಲ್ಲಿಯೂ ಹೆಚ್ಚುರಿಯಾಯಿತಿಗಳನ್ನು ತೋರಿಸತಕ್ಕ ವಿಷಯದಲ್ಲಿ ಮೈಸೂರು ಸೀಮೆಯ ರೆವಿನ್ಯೂ ಕಮಿಷನರವರು ಬರೆಸಿದ 1909ನೆ ಇಸವಿ ಏಪ್ರಿಲ್ 14ನೆ ತಾರೀಖಿನ ಡಿವೋ ಲೇಖನವನ್ನು ಪರಾಂಬರಿಸಲಾಯಿತು.

2. ಇದೇ ವಿಷಯವಾಗಿ ಸಾದರಾದ ಇದರಡಿ ಕಂಡ ಸರ್ಕಾರಿ ಹುಕ್ಕುಂಗಳನ್ನು ಸಹಾ ಪುನಹಾ ಓದಲಾಯಿತು :—

(*a*) 1909ನೆ ಇಸವಿ ಜನವರಿ 4ನೆ ಮೆರ್ಕುಂನ 4332ನೆ ನಂಬರ್ ಹುಕ್ಕುಂ.

(*b*) 1909ನೆ ಮಾರ್ಚಿ 3ನೆ ಮೆರ್ಕುಂನ 6859ನೆ ನಂಬರ್ ಹುಕ್ಕುಂ.

(*c*) 1909ನೆ ಮಾರ್ಚಿ 20ನೆ ಮೆರ್ಕುಂನ 7506ನೆ ನಂಬರ್ ಹುಕ್ಕುಂ.

(*d*) 1909ನೆ ಏಪ್ರಿಲ್ 7ನೆ ಮೆರ್ಕುಂನ 8156ನೆ ನಂಬರ್ ಹುಕ್ಕುಂ.

(*e*) 1909ನೆ ಮೇ 1ನೆ ಮೆರ್ಕುಂನ 9058ನೆ ನಂಬರ್ ಹುಕ್ಕುಂ.

—ಕ್ಯಾಂಪು ನಂಬರ್ 20–30, ಮೊಕ್ಕಾಂ ಮೈಸೂರು.

ತಾರೀಖು 30ನೆ ಮೇ 1909ನೆ ಇಸವಿ.

1908–09ನೆ ಕೀಲಕ ಸಂವತ್ಸರದಲ್ಲಿ ಕಾಲಸ್ಥಿತಿ ಸುಭಿಕ್ಷವಾಗಿಲ್ಲದರಿಂದ, ಆ ಸಾಲಿನ ಜಮಿಾನು ಕಂದಾಯವನ್ನು ರಿಮಿಾರ್ಷ್ ಯಾ ಮುಜರೆ ಕೊಡತಕ್ಕ ಮತ್ತು ಅದನ್ನು ವಸೂಲ್ಮಾಡದೆ ಕೆಲವುಕಾಲ ನಿಲ್ಲಿಸತಕ್ಕ ವಿಷಯದಲ್ಲಿ, ಸಮ್ಮಂಧಪಟ್ಟ ಸಮಸ್ತಜನಗಳ ತಿಳುವಳಿಕೆ ಮತ್ತು ನಡವಳಿಕೆ ಬಗ್ಗೆ ಇದರಡಿ ಕಂಡ ಅನುಜ್ಞೆಗಳನ್ನು ಮೇಲೆ ನಮೂದಾಗುವ ಸರ್ಕಾರಿ ಹುಕ್ಕುಂಗಳಲ್ಲಿ ಕಂಡವುಗಳಿಗೆ ಬದಲಾಗಿ ಸಾದರ್ಮಾಡೋಣಾಗಿರುತ್ತೆ :—

1. ತರೀ ಜಮಿಾನಾಗಿ ವಿಂಗಡಿಸಲ್ಪಟ್ಟ ಜಮಿಾನುಗಳ ಕಂದಾಯ.—ನೀರಿನ ಆಸರೆ ಯಾವ ಮೂಲಕವಾಗಿಯಾದರೂ ಇರಲಿ, ತರಿಯಾಗಿ ವಿಂಗಡಿಸಲ್ಪಟ್ಟ ಜಮಿಾನುಗಳಲ್ಲಿ 1908–09ನೆ ಕೀಲಕ ಸಾಲಿನಲ್ಲಿ ತರೀ ಫಸಲು ಶುದ್ಧಾಂಗವಾಗಿ ಆಗದೆ ಇದ್ದರೂ ಅಥವಾ ಸಾಧಾರಣ ಸಾಲಿನ ಫಸಲಿನಲ್ಲಿ ಶೇಕಡಾ 25ರ ಭಾಗಕ್ಕೆ ಮಿಾರದಷ್ಟು ಫಸಲು (ಅಂದರೆ ಸಾಧಾರಣ 16 ಆಣೆ ಬೆಳೆ ಪೈಕಿ 4 ಆಣೆಗೆ ಮಿಾರದಷ್ಟು ಫಸಲು) ಆಗಿದ್ದರೂ ಸರಿಯೆ, ಅರ್ಧ ಕಂದಾಯವನ್ನು ರಿಮಿಾರ್ಷ್ ಯಾ ಮುಜರೆ ಕೊಟ್ಟು ಬಾಕೀ ಅರ್ಧ ಕಂದಾಯವನ್ನು ವಸೂಲ್ಮಾಡತಕ್ಕದ್ದು.

2. ಫಸಲು ಶುದ್ಧಾಂಗವಾಗಿ ಆಗದೆ ಇರುವ ಜಮಿಾನುಗಳಿಗೆ ಮುಜರೆ ಕೊಡುವೆಂತೆ ಅದೇ ಪ್ರದೇಶದಲ್ಲಿರುವ ಹಿಡುವಳಿ ಬಂಜರು ಜಮಿಾನಿಗೂ ಅದೇ ದರದ ರಿಮಿಾರ್ಷ್ ಕೊಡಬೇಕು. ಆದರೆ "ಮಾಮೂಲು ಬಂಜರು" ಜಮಿಾನುಗಳಿಗೆ ಅಂದರೆ, ಕ್ರಮೆವಾಗಿ ಸಾಧಾರಣ ಸಾಲಿನಲ್ಲಿ ಬೆಳೆ ಇಡಲ್ಪಡದ ಹಿಡುವಳಿಯು ಜಮಿಾನಾಗಿದ್ದು ಈ ವರ್ಷವೂ ಸಾಧಾರಣ ಬೆಳೆಯಾಗಿದ್ದ ಪಕ್ಷದಲ್ಲಿ ಅಂಥಾ ಜಮಿಾನು ಬಂಜರಾಗಿಯೇ ಇರುತ್ತಿತ್ತೆಂದು ಊಹಿಸಬಹುದಾದ ಜಮಿಾನುಗಳಿಗೆ ರಿಮಿಾರ್ಷ್ ಕೊಡತಕ್ಕದ್ದಲ್ಲ.

3. ತರಿಯಾಗಿ ವಿಂಗಡಿಸಲ್ಪಟ್ಟ ಜಮಿಾನಿನಲ್ಲಿ ಸರ್ಕಾರಿ ನೀರಿನ ಆಸರೆಯಿಂದ ಅಥವಾ ಅಂಥಾ ಆಸರೆ ಇಲ್ಲದೆ ಖುಷ್ಕಿ ಫಸಲನ್ನು ಬೆಳೆದಿದ್ದರೆ, 1ನೆ ಪ್ಯಾರಾದಲ್ಲಿ ಕಂಡ ರಿಯಾಯಿತಿಯನ್ನು ಇದಕ್ಕೂ ತೋರಿಸಬೇಕು, ಆದರೆ ಅಂಥಾ ಗ್ರಾಮದಲ್ಲಿ ವಸೂಲಾಗುತ್ತಿರುವ ಖುಷ್ಕಿ ಕಂದಾಯದ ಸರಾಸರಿ ದರವನ್ನೂ ಸಹಾ ಖುಷ್ಕಿ ಬೆಳೆ ಬೆಳೆದ ಸದರಿ ಜಮಿಾನಿನಮೇಲೆ ವಸೂಲ್ಮಾಡಬೇಕು. ಈ ಜಮಿಾನುಗಳನ್ನು ಅಳತೆ ಮಾಡಬೇಕಾದ್ದಿಲ್ಲ, ಆದರೆ ಒಂದು ಪೂರಾ ಸರ್ವೆ ನಂಬರನ್ನಾಗಲಿ ಅಥವಾ ಒಂದು ಸರ್ವೆ ನಂಬರಿನ, ಒಂದು ಪ್ರತ್ಯೇಕ ಭಾಗವನ್ನಾಗಲಿ, ಪೂರ್ತಿ ಇದ್ದಂತೆ ಭಾವಿಸತಕ್ಕದ್ದು. ಖುಷ್ಕಿ ಬೆಳೆಯು ಶುದ್ಧಾಂಗವಾಗಿ ಆಗದಿದ್ದರೆ ಅಂಥಾ ಖುಷ್ಕಿ ಬೆಳಗಾಗಿ ಹೆಚ್ಚು ತೆರಿಗೆಯನ್ನು ವಸೂಲ್ಮಾಡತಕ್ಕದ್ದಿಲ್ಲವು.

4. ಖುಷ್ಕಿಯಾಗಿ ವಿಂಗಡಿಸಲ್ಪಟ್ಟ ಜಮಿಾನುಗಳ ಕಂದಾಯ.—ಖುಷ್ಕಿಯಾಗಿ ವಿಂಗಡಿಸಲ್ಪಟ್ಟ ಜಮಿಾನುಗಳಲ್ಲಿ ಖುಷ್ಕಿ ಬೆಳೆ ಶುದ್ಧಾಂಗವಾಗಿ ಆಗದಿದ್ದರೂ ಅಥವಾ ಆದ ಬೆಳೆ ಸಾಧಾರಣ ಸಾಲಿನ ಬೆಳೆಯಲ್ಲಿ ಶೇಕಡಾ 25 ರಷ್ಟಕ್ಕೆ ಮಿಾರದಂತೆ ಆಗಿದ್ದರೂ (ಅಂದರೆ ಸಾಧಾರಣ 16 ಆಣೆ ಪೈಕಿ 4 ಆಣೆಗೆ ಮಿಾರದಂತೆ ಬೆಳೆ ಆಗಿದ್ದರೂ) ಅರ್ಧ ಕಂದಾಯವನ್ನು ನಿಲ್ಲಿಸಿಬಿಟ್ಟು ಬಾಕಿ ಅರ್ಧವನ್ನು ವಸೂಲ್ಮಾಡಬೇಕು.

5. ಖುಷ್ಕಿ ಜಮಿಾನಾಗಿ ವಿಂಗಡಿಸಲ್ಪಟ್ಟು ಸರ್ಕಾರದ ನೀರು ಉಪಯೋಗಿಸಿಕೊಳ್ಳುವದಕ್ಕಾಗಿ ಅದರ ಮೇಲೆ ನೀರು ಸರದಿ ಕಂದಾಯವನ್ನು ತರೀ ಕಂದಾಯಕ್ಕೆ ಸೇರಿಸದೆ ಪ್ರತ್ಯೇಕವಾಗಿ ವಸೂಲಾಗುತ್ತಿದ್ದರೆ, ಅಂಥಾ ಜಮಿಾನುಗಳಿಗೆ ತರಿಯಾಗಿ ವಿಂಗಡಿಸಲ್ಪಟ್ಟು ತರಿ-ಕಂದಾಯ ತೆರುವ ಜಮಿಾನುಗಳಿಗೆ ತೋರಿಸುವಂಥಾ ರಿಯಾಯಿತಿಗಳನ್ನು ತೋರಿಸಬೇಕು.

6. ಬಾಗಾಯಿತು ಜಮಿಾನೆಂತ ವಿಂಗಡಿಸಿದ ಜಮಿಾನುಗಳ ಕಂದಾಯ.—ಬಾಗಾಯಿತು ಜಮಿಾನುಗಳಂತ ತರಗತಿ ವಿಂಗಡಿಸಿರುವ ಜಮಿಾನುಗಳಲ್ಲಿ ಸಾಮಾನ್ಯವಾಗಿ ತರಿ ಫಸಲನ್ನು ಇಡುತ್ತಾ ಇದ್ದರೆ, ಅಂಥಾ ಜಮಿಾನುಗಳಿಗೆ ತರಿ ಜಮಿಾನುಗಳಿಗೆ ಮೇಲೆ ತೋರಿಸಿರುವ ರಿಯಾಯಿತಿಯನ್ನೇ ತೋರಿಸತಕ್ಕದ್ದು.

7. ಅಡಿಕೆ ಮೆರಗಳಾಗಲಿ ತೆಂಗಿನಮೆರಗಳಾಗಲಿ ಅಥವಾ ಅವುಗಳ ಫಸಲಾಗಲಿ ಬಹಳವಾಗಿ ನಷ್ಟವಾಗಿದ್ದರೆ, ಡೆಪ್ಯುಟಿ ಕಮಿಷನರು, ಅಂಥಾ ಜಮಿನಿನ ಅರ್ಧ ಕಂದಾಯದ ವಸೂಲಾತಿಯನ್ನು ಕೆಲವು ಕಾಲ ನಿಲ್ಲಿಸಿಡಬಹುದು. ಇದಕ್ಕೆ ಕಾರಣಗಳನ್ನು ರಿಕಾರ್ಡು ಮಾಡಬೇಕು.

8. ಲೋಕಲ್ ಸೆಸ್ಸುಗಳು.—ಕಂದಾಯವೆನ್ನು ಮಾಫ್ ಮಾಡಿದ ಮಾತ್ರಕ್ಕೆ ಲೋಕಲ್ ಸೆಸ್ಸನ್ನೂ ಮಾಫು ಮಾಡಕೂಡದು. ಲೋಕಲ್ ಸೆಸ್ಸುಗಳನ್ನು ಮಾಮೂಲ್ ಮೇರೆಗೆ ಒಟ್ಟು ಕಂದಾಯದಮೇಲೆ ವಸೂಲ್ಮಾಡಲೇಬೇಕು. (ಮಾಫು ಮಾಡಿದ್ದ ಭಾಗದ ಕಂದಾಯದಮೇಲೂ ಈ ಸೆಸ್ಸನ್ನು ವಸೂಲ್ಮಾಡಬೇಕು.) ಈ ಸೆಸ್ಸುಗಳ ವಸೂಲಾತಿಯನ್ನು ಕೆಲವು ಕಾಲ ನಿಲ್ಲಿಸಿ ರಿಯಾಯಿತಿ ತೋರಿಸುವದು ಅವಶ್ಯಕವೆಂದು ಡೆಪ್ಯುಟಿ ಕಮಿಷನರಿಗೆ ತೋರಿದರೆ ಅಂಥಾ ವಿಶೇಷ ಸಂದರ್ಭಗಳಲ್ಲಿ ಮಾತ್ರ ಕೆಲವುಕಾಲ ವಸೂಲಾತಿಯನ್ನು ನಿಲ್ಲಿಸಬಹುದು.

9. ಮೈನರ್ ಯಾ ಚಿಲ್ಲರೆ ಇನಾಂ ಜಮಿನುಗಳು.—ಕಂದಾಯ ವಸೂಲಾತಿಯನ್ನು ಕೆಲವುಕಾಲ ನಿಲ್ಲಿಸಿಡುವ ವಿಚಾರದಲ್ಲಿಯೂ ಕಂದಾಯವೆನ್ನು ಮಾಫು ಮಾಡುವ ವಿಚಾರದಲ್ಲಿಯೂ ಕೊಟ್ಟಿರುವ ಮೇಲ್ಕಂಡ ಹುಕುಮ್ಗುಗಳು, ಸಂಪೂರ್ಣ ಕಂದಾಯ ದಾಖಲಾದ ಚಿಲ್ಲರೆ ಇನಾಮು ಜಮಿನುಗಳಿಗೂ ಅಥವಾ ಸರ್ವೆ ಸೆಟ್ಲ್ಮೆಂಟಿನಲ್ಲಿ ಬಿಲಿ ನಿಷ್ಕರ್ಷೆಯಾದ ಮೊಬಲಗಿಗೆ ಸಮಾನವಾದ ಅಥವಾ ಹೆಚ್ಚಾದ ಕ್ವಿಟ್‌ರೆಂಟ್ ಯಾ ಜೋಡಿ ದಾಖಲಾದ ಚಿಲ್ಲರೆ ಇನಾಮು ಜಮಿನುಗಳಿಗೂ ಸಹ ಲಗಾವಾಗತಕ್ಕದ್ದು.

10. ಖುಲ್ಲು ಇನಾಂ ಗ್ರಾಮಗಳು.—ಸರ್ಕಾರದ ಆಡಳಿತದಲ್ಲಿರುವ ಖುಲ್ಲು ಇನಾಂ ಗ್ರಾಮಗಳಿಗೂ ಸಹ ಮೇಲ್ಕಂಡ ಹುಕುಂಗಳು ಲಗಾವಾಗುತ್ತವೆ.

11. ಸಾಮಾನ್ಯವಾದ ಷರಾಗಳು.—ಈ ಹುಕುಂಪ್ರಕಾರ ಮಾಫು ಮಾಡಿದ ಕಂದಾಯಗಳನ್ನೆಲ್ಲಾ ಚನ್ನಾಗಿ ಪ್ರಕಟಿಸಿ ಅವುಗಳನ್ನು ರೈತರ ಪಟ್ಟೆಬುಕ್ಕುಗಳಲ್ಲಿ ದಾಖಲ್ಮಾಡಿಸುವಂತೆ ಜವಾಬಂದಿ ಆಫಿಸರುಗಳು ಹುಷಾರಿಯಿಂದ ನೋಡಿಕೊಳ್ಳಬೇಕು.

12. ಗ್ರಾಮಗಳಿಗೂ ಒಂದೇ ತರಹೆಯ ಪ್ರದೇಶಗಳಿಗೂ ಎಲ್ಲಾ ಒಟ್ಟಾಗಿ ಕಂದಾಯವೆನ್ನು ಮಾಫು ಮಾಡಬೇಕು. (ಕಂದಾಯವೆನ್ನು ಮಾಫು ಮಾಡುವುದರಲ್ಲಿಯೇ ಆಗಲಿ ಅಥವಾ ಅದರ ವಸೂಲಾತಿಯನ್ನು ಕೆಲವುಕಾಲ ನಿಲ್ಲಿಸಿ ಇಡುವುದರಲ್ಲಿಯೇ ಆಗಲಿ) ಇಂಥಾ ರಿಯಾಯಿತಿಯನ್ನು ತೋರಿಸುವಾಗ್ಯೆ ಜಮಿನಿನಲ್ಲಿ ಉತ್ಪತ್ತಿಯಾದ ಫಸಲಿಗನುಸಾರವಾಗಿ ಮಾಡತಕ್ಕದ್ದೇ ಹೊರತು ಸದರಿ ಜಮಿನಿನ ಹಿಡುವಳಿದಾರನ ಸ್ಥಿತಿಯನ್ನು ಆಲೋಚಿಸಿ ಮಾಡತಕ್ಕದ್ದಲ್ಲ.

13. ವಸೂಲಾಗಬೇಕಾದ ಅರ್ಧ ಕಂದಾಯವೆನ್ನು ಕಾಲಕ್ಕೆ ಸರಿಯಾಗಿ ಕೊಡದೆಹೋದ ಸಂದರ್ಭದಲ್ಲಿ ಬಾಕಿ ಅರ್ಧ ಕಂದಾಯವೆನ್ನು ಮಾಫು ಮಾಡುವುದಿಲ್ಲವೆಂತ ಯಾವುದಾದರೂ ಬಂದೊಂದು ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರಾಗಲಿ ಸಬ್ ಡಿವಿಜ಼ನ್ ಆಫಿಸರಾಗಲಿ ತಿರಸ್ಕರಿಸಬಹುದು.

14. ಮೇಲ್ಕಂಡ ಹುಕುಂಗಳು ಈ ಕೆಳಗೆ ತೋರಿಸಿರುವ ಪ್ರದೇಶಗಳಲ್ಲಿ ಜಾರಿಯಲ್ಲಿ ಬರತಕ್ಕದ್ದು:—

ಕೋಲಾರ	ಡಿಸ್ಟ್ರಿಕ್ಟು	ತವುಂ ಡಿಸ್ಟ್ರಿಕ್ಟು.
ತುಮಕೂರು	,,	,,
ಬೆಂಗಳೂರು	,,	ಈ ಹುಕುಮಿಗೆ ಲಗ ತ್ತಿರುವ ಪಟ್ಟಿಯನ್ನು ನೋಡತಕ್ಕದ್ದು.
ಮೈಸೂರು	,,	
ಹಾಸನ	,,	
ಕಡೂರು	,,	
ಶಿವಮೊಗ್ಗಾ	,,	
ಚಿತ್ರದುರ್ಗ	,,	

ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರಿಟರಿ.

ಪಟ್ಟಿ.

ಬೆಂಗಳೂರು ಡಿಸ್ಟ್ರಿಕ್ಟು.

ತಾಲ್ಲೂಕಿನ ಹೆಸರು.		ಹೋಬಳಿಯ ಹೆಸರು.
1. ಬೆಂಗಳೂರು	... ...	ಹೆಸರುಘಟ್ಟ.
2. ಹೊಸಕೋಟೆ	... ...	1. ಕಸಬಾ ಹೋಬಳಿ
		2. ಜಡಿಗೇನಹಳ್ಳಿ
		3. ನಂದಗುಡಿ
		4. ಸೂಲಿಬೆಲೆ
3. ದೇವನಹಳ್ಳಿ	... ...	ತಾಲ್ಲೂಕೆಲ್ಲಾ.
4. ದೊಡ್ಡಬಳ್ಳಾಪುರ	... ...	1. ಮಧುರೆ
		2. ದೊಡ್ಡಬೆಳವಂಗಲ
		3. ಕಸಬಾ ಹೋಬಳಿ
5. ನೆಲಮಂಗಲ	... ...	1. ಕಸಬಾ ಹೋಬಳಿ
		2. ದಾಸನಪುರ
		3. ತ್ಯಾಮಗೊಂಡ್ಲು
6. ಮಾಗಡಿ	... ...	1. ತಿಪ್ಪಸಂದ್ರ
		2. ಕುದೂರು
		3. ಸೋಲೂರು
7. ಚನ್ನಪಟ್ಟಣ	... ...	1. ವಿರುಪಾಕ್ಷಿಪುರ
		2. ಕಸಬಾ ಹೋಬಳಿ
		3. ಮಳೂರು

ತುಮಕೂರು ಡಿಸ್ಟ್ರಿಕ್ಟು—
ತವಾಂ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು—
ತವಾಂ ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು.

1. ನಾಗಮಂಗಲ	....	ತವಾಂ ತಾಲ್ಲೂಕು.
2. ಕೃಷ್ಣರಾಜಪೇಟೆ	....	1. ಸಂತೆಬಾಚಳ್ಳಿ
		2. ಕಿಕ್ಕೇರಿ
		3. ಕಸಬಾ ಹೋಬಳಿ
3. ಮಂಡ್ಯ	....	ತವಾಂ ತಾಲ್ಲೂಕು.

ಹಾಸನ ಡಿಸ್ಟ್ರಿಕ್ಟು.

1. ಅರಸೀಕೆರೆ	... .	ತವಾಂ ತಾಲ್ಲೂಕು.
2. ಚನ್ನರಾಯಪಟ್ಟಣ	....	1. ಕಸಬಾ ಹೋಬಳಿ
		2. ಬಾಗೂರು
		3. ಅಣತಿ
		4. ನುಗ್ಗಿಹಳ್ಳಿ
		5. ಹಿರಿಸಾವೆ
		6. ಶ್ರವಣಬೆಳಗೊಳ
3. ಹೊಳೆನರಸೀಪುರ	....	1. ಕಸಬಾ ಹೋಬಳಿ
		2. ದೊಡ್ಡಕಡನೂರು
4. ಬೇಲೂರು	....	1. ಹಳೆಬೀಡು
		2. ಮಾದಿಹಳ್ಳಿ

ಶಿವಮೊಗ್ಗ ಡಿಸ್ಟ್ರಿಕ್ಟು.

1. ಶಿವಮೊಗ್ಗ	....	ತಾಲ್ಲೂಕೆಲ್ಲಾ.
2. ಚನ್ನಗಿರಿ	... .	ಡಿಟೋ
3. ಹೊನ್ನಾಳಿ	....	ಸಾಸವೆಹಳ್ಳಿ

ಕಡೂರು ಡಿಸ್ಟ್ರಿಕ್ಟು.

ತಾಲ್ಲೂಕಿನ ಹೆಸರು.				ಹೋಬಳಿಯ ಹೆಸರು.
1. ಚಿಕ್ಕಮಗಳೂರು	....	....	....	ಲಕ್ಕ್ಯೆ
2. ಕಡೂರು	....	....	....	ತಾಲ್ಲೂಕೆಲ್ಲಾ

ಚಿತ್ರದುರ್ಗ ಡಿಸ್ಟ್ರಿಕ್ಟು.

1. ಚಿತ್ರದುರ್ಗ	....	....	....	1. ಕಸಬಾ ಹೋಬಳಿ
				2. ತುರುವನೂರು
2. ಚಳ್ಳಕೆರೆ	....	....	....	ತಾಲ್ಲೂಕೆಲ್ಲಾ
3. ಹಿರಿಯೂರು	....	....	....	ಡಿಟೋ
4. ದಾವಣಗೆರೆ	....	....	....	1. ಕಸಬಾ ಹೋಬಳಿ
				2. ಹದಡಿ
5. ಜಗಳೂರು	....	....	....	1. ಜಗಲೂರು ಹೋಬಳಿ
6. ಹೊಸದುರ್ಗ	....	....	....	1. ಹೊಸದುರ್ಗ
				2. ಮಾಕೋಡು
				3. ಬೂದಿಹಾಳು
				4. ಮಾಡದಕೆರೆ
7. ಹರಿಹರ (ಸಬ್ ತಾಲ್ಲೂಕು)	....	....	....	1. ಕಸಬಾ ಹೋಬಳಿ
				2. ಮಳಿಬೆನ್ನೂರು

ತಾರೀಖು 5ನೆ ಜೂ೯ 1909.

ನಂ. ಜು. 3769—ಕೋರ್ಟ್ಸ್ 283-08-5, ಸ೯ 1909ನೆ ಇಸವಿ ಮಾರ್ಚಿ 17ನೆ ತಾರೀಖಿನ ಜು. 2750—ಕೋರ್ಟ್ಸ್ 283-08-3ನೆ ನಂಬರ ಇಸ್ತಿಹಾರ್ನಾಮೆಯಲ್ಲಿ, ಚೀಫ್ ಜಡ್ಜಿಯರಾದ ಮಿ॥ ಜಸ್ಟಿಸ್ ಇಸ್ವೆ, ಸಿ. ಎಸ್. ಐ., ಬ್ಯಾರಿಸ್ಟರ್ ಅಟ್ ಲಾ, ಯವರಿಗೆ 1909ನೆ ಜೂ೯ 15ನೆ ತಾರೀಖು ಲಾಗಾಯಿತ್ತು ಮಂಜೂರ್ಮಾಡಿರುವ 27 ದಿನಗಳ ಪ್ರಿವಿಲೇಜ್ ರಜಾವನ್ನು ಇವರು ಉಪಯೋಗಿಸಿಕೊಂಡು ಗೈರ್‌ಹಾಜರಾಗುವ ಕಾಲದಲ್ಲಿ ಮೈಸೂರು ಚೀಫ್ ಕೋರ್ಟಿನಲ್ಲಿ ಇದರಡಿ ಕಂಡ ಹಂಗಾಮಿ ವಿವಾಟುಗಳನ್ನು ಶ್ರೀಮ೯ ಮಹಾರಾಜಾಸಾಹೇಬ್ಬರವರು ಮಂಜೂರ್ಮಾಡಿ ಇರುತ್ತಾರೆ :—

1. ಮಿ॥ ಜಸ್ಟಿಸ್ ಪಿ. ಎಸ್. ಕೃಷ್ಣರಾವ್, ರಾವ್‌ಬಹದೂರ್, ಬಿ. ಎ., ಬಿ. ಎಲ್., ರವರು ಚೀಫ್ ಜಡ್ಜಿ ಕೆಲಸವನ್ನು ಹಂಗಾಮಿ ತರೀಕ್ ನೋಡತಕ್ಕದ್ದು.

2. ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟೆರಿಯವರಾದ ಮಿ॥ ಕೆ. ಎಸ್. ಚಂದ್ರಶೇಖರ ಐಯ್ಯರ್, ಬಿ. ಎ, ಬಿ. ಎಲ್., ರವರು ಜಡ್ಜಿ ಕೆಲಸವನ್ನು ಹಂಗಾಮಿ ತರೀಕ್ ನೋಡತಕ್ಕದ್ದು.

ತಾರೀಖು 4ನೆ ಜುಲ್ಯೈ 1909.

ನಂ. 12118—ಸ್ಯಾನಿಟೆರಿ 76-08-53, ಸಮಸ್ತ ಜನರ ತಿಳಿವಳಿಕೆ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.				ತಾಲ್ಲೂಕು.
ಹೆಬ್ಬಾಳು	...	...	...	ಎಡತೊರೆ
ಬ್ಯಾಡರಹಳ್ಳಿ	...	...	...	ಡಿಟೋ
ಗಂಡಕೆರೆ	...	...	...	ಹುಣಸೂರು
ದೊಡ್ಡಹೊಮ್ಮ	...	...	...	ನಂಜನಗೂಡು
ಕಸೂರು	...	...	...	ಚಾಮರಾಜನಗರ
ಚಿಕ್ಕನಹಳ್ಳಿ	...	...	...	ಕೃಷ್ಣರಾಜಪೇಟೆ

ತಾರೀಖು 7ನೆ ಜೂ೯ 1909.

ನಂ. 12214—ಸ್ಯಾನಿಟೆರಿ 76-08—56, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.					ತಾಲ್ಲೂಕು.
ಚಿಕ್ಕಬೇಗೂರು	...	...	...	...	ಚಾಮರಾಜನಗರ.
ಪಂಜನಹಳ್ಳಿ	...	...	...	...	ಗುಂಡ್ಲಪೇಟೆ.

ತಾರೀಖು 9ನೆ ಜೂ೯ 1909.

ನಂ. 12364—ಸ್ಯಾ. 196-08-2, ಬೆಂಗಳೂರು ಸಿಟಿ ಮ್ಯುನಿಸಿಪಲ್ ಸಭೆಯವರ ಅಧಿಕಾರ ಸರಹದ್ದಿನೊಳಗೆ ಇರುವ ಸ್ಥಳೀಯ ಪ್ರದೇಶದಲ್ಲಿ 1909ನೆ ಜುಲೈ ಗುರ್ರ ಲಾಗಾಯಿತು ಮತ್ತೊಂದು ವರ್ಷದ ವರೆಗೆ 1906ನೆ ಇಸವಿಯ 1ನೆ ನಂಬರ್ ರೆಗ್ಯುಲೇಷನಿನ 2ನೆ ಪ್ರಕರಣದ 1ನೆ ಕಲಂ ಪ್ರಕಾರ ಕಿಡುಬು ಹಾಕಿಸುವುದನ್ನು ಬಲಾತ್ಕರಿಸಲಾಗುವುದೆಂದು, 1908ನೆ ಜೂ೯ 5ನೆ ಮತ್ತು೦ 12698—ಮೈದ್ಯ. 67-07-11ನೆ ನಂಬರ್ ಸರ್ಕಾರೀ ಇಸ್ತಿಹಾರ್ನಾವೆಯು ಜತೆಗೆ, ಈ ಮೂಲಕ ಪ್ರಕಟಿಸಿ ಇದೆ.

ತಾರೀಖು 14ನೆ ಜೂ೯ 1909.

ನಂ. 12547—ಸ್ಯಾನಿಟೆರಿ 169-08-8, ಡೆಪ್ಯುಟಿ ಸ್ಯಾನಿಟೆರಿ ಕಮಿಷನರ್ ಮಿ॥ ಪಿ. ಪಲ್ಪು ಯವರು 1909ನೆ ಮೇ 12ನೆ ನಂಬರ್ು೦ 11264—ಸ್ಯಾನಿಟೆರಿ 169-08-6ನೆ ನಂಬರ್ ಹುಕುಮಿನ ಮೂಲಕ ತಮಗೆ ಮಂಜೂರಾಗಿದ್ದ 13 ದಿವಸಗಳ ಪ್ರಿವಿಲೀಜ್ ರಜಾ ಪೈಕಿ 11 ದಿನಗಳ ರಜಾವನ್ನು ಮೂತ್ರ ಉಪಯೋಗಿಸಿಕೊಂಡಪ್ರಯುಕ್ತ ಅವರು ಉಪಯೋಗಿಸಿಕೊಳ್ಳದೆ ಹೋದ 2 ದಿನಗಳ ರಜಾವನ್ನು ಈ ಮೂಲಕ ವಜಾ ಮಾಡಿರುತ್ತದೆ.

ತಾರೀಖು 14ನೆ ಜೂ೯ 1909.

ನಂ. 12548—ಸ್ಯಾನಿಟೆರಿ. 76—08—57, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಬಡಗಲಪುರ	ಚಾಮರಾಜನಗರ
ಕರಿಯನಕಟ್ಟೆ	ಡಿಟೋ

ತಾರೀಖು 14ನೆ ಜೂ೯ 1909.

ನಂ. 12550—ಸ್ಯಾನಿಟೆರಿ 76—08—58, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ನ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾವೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ಹೊಸೂರು	ಗುಂಡ್ಲ ಪೇಟೆ

ತಾರೀಖು 15ನೆ ಜೂ೯ 1909.

ನಂ. 12607—ಸ್ಯಾನಿಟೆರಿ 14—08-31, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ನ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್ನಾವೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ	ತಾಲ್ಲೂಕು.
ದೊಡ್ಡ ಕೊಪ್ಪಲು (ಚೌಡವಳ್ಳಿ ದಾಖಲೆ)	ಹಾಸನ

ತಾರೀಖು 15ನೆ ಜೂ೯ 1909.

ನಂ. 12609—ಸ್ಯಾನಿಟೆರಿ 14-08-32, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶವೆಂದು ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳವು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿದೆ.

ಸ್ಥಳ.	ತಾಲ್ಲೂಕು.
ಹಾಸನ ಟವ೯	ಹಾಸನ.

ತಾರೀಖು 8ನೆ ಜೂ೯ 1909.

ನಂ. ಜು. 3788—ಕೋರ್ಟ್ಸ್ 350-08-2, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177 ಮತ್ತು 191ನೆ ಪ್ರಕರಣವನ್ನನುಸರಿಸಿ, ಕೋಲಾರ ಮುನಸೀಫರಾದ ಮಿ॥ ಜಿ. ಶ್ರೀನಿವಾಸ ಅಯ್ಯರ್, ಬಿ. ಎ., ಎಂ. ಎಲ್., ರವರಿಗೆ 1909ನೆ ಇಸವಿ ಜೂ೯ 7ನೆ ತಾರೀಖು ಲಾಗಾಯಿತು ಪೂರಾ ತಲಬಿನ ಮೇಲೆ 12 ದಿನಗಳ ಪ್ರಿವಿಲೀಜು ರಜಾವನ್ನು ಮಂಜೂರ್ಮಾಡಿರುತ್ತೆ.

ಚೀಫ್ ಕೋರ್ಟು ಡೆಪ್ಯುಟಿ ಕ್ಲಾರ್ಕ್ ಡಿ. ಆಳಸಿಂಗರಾಚಾರ್ಯವರನ್ನು, ಮೇಲ್ಕಂಡ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರಿಗೂ ಕಡೇ ತರಗತಿಯ ಮುನಸೀಫರನ್ನಾಗಿ ಹಂಗಾಮಿ ತರೀಕ್ ನೇಮಿಸಿ ಇರುತ್ತೆ.

ತಾರೀಖು 8ನೆ ಜೂ೯ 1909.

ನಂ. ಜ. 3790—ಪೊಲೀಸು 190-08-2, ಪೊಲೀಸು ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ವಿ॥ ಟಿ. ಎಸ್. ಅಲ್ಲಿಖಾನ್‌ರವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷ್ಯನ್‌ಗಳ 177ನೆ ಪ್ರಕರಣದ ಮೇರೆಗೆ, ರಜಾ ಉಪಯೋಗಿಸಿಕೊಳ್ಳುವ ತಾರೀಖು ಬಾಗಾಯಿತು, ಒಂದು ತಿಂಗಳೂ ಇಪ್ಪತ್ತೈದು ದಿವಸಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡೋಣಾಗಿದೆ.

ತಾರೀಖು 9ನೆ ಜೂ೯ 1909.

ನಂ. 12366—ಪರೀಕ್ಷೆ. 19-08-2, ಇದರಡಿ ಕಂಡ ಪರೀಕ್ಷ್ಯರು 1909ನೆ ಇಸವಿ ಮೇ ಮೂಹೆಯಲ್ಲಿ ನಡೆದ ಮೈಸೂರು ಲೋಕಲ್ ಸರ್ವಿಸ್ ಫಾರೆಸ್ಟ್ರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ.

ಯೋಗ್ಯತಾ ನಂಬರ್	ರಿಜಿಸ್ಟರ್ ನಂಬರು	ಹೆಸರು.	ಹುದ್ದೇ ಅಥವಾ ಮೇಲ್ವಿಳಾಸ.
1	388	ನರಸಿಂಹಯ್ಯ, ಮುದಗಂಡೂರು, ವಿ. ...	ಫಾರೆಸ್ಟ್ ರೇಂಜರ್, ಸೊರಬ ರೇಂಜು, ಸಾಗರ
2	108	ಧರ್ಮಾಜಿ ನಾಗೇಶರಾವ್, ಹೆಚ್. ...	4ನೆ ಕ್ಲಾರ್ಕ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸು, ಚಿಕ್ಕಮಗಳೂರು.
3	111	ಧೋಂಡರಾವ್, ಕೆ. ಜಿ. ...	ಫಾರೆಸ್ಟ್ ರೇಂಜರ್, ಹಾಸನ ರೇಂಜು, ಹಾಸನ
	423	ನರಸಿಂಗರಾವ್, ಬಾಪ್ಟ್. ...	2ನೆ ಕ್ಲಾರ್ಕ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸು, ಚಿಕ್ಕಮಗಳೂರು.
5	938	ವೆಂಕೋಬರಾವ್, ತಂಜಾವೂರು ...	ಹೆಡ್ ಕ್ಲಾರ್ಕ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸು, ಬೆಂಗಳೂರು
	405	ನರಸಿಂಹೈಯ್ಯಂಗಾರ್, ಬಿಂಡಿಗನವಿಲೆ ...	ಫಾರೆಸ್ಟ್ ರೇಂಜ್ ಆಫಿಸರ್, ಐಯ್ಯನೂರು, ಶಿವಮೊಗ್ಗ
	670	ಶ್ರೀಕಂಠಯ್ಯ, ಎಸ್. ...	ಫಾರೆಸ್ಟರ್ ಗ್ರೇಡು ಸಬ್ ರೇಂಜ್, ಹಾಸನ

2. ಇದರಡಿ ಕಂಡ ರಿಜಿಸ್ಟರ್ ನಂಬರುಳ್ಳ ಪರೀಕ್ಷ್ಯರು ಮೇಲ್ಕಂಡ ಪರೀಕ್ಷೆಯಲ್ಲಿ ತೇರ್ಗಡೆಯಾಗದವರಾಗಿರುತ್ತಾರೆ.

ತೇರ್ಗಡೆ ಹೊಂದದವರು.

250	570	652
377	608	933

ತಾರೀಖು 10ನೆ ಜೂ೯ 1909.

ನಂ. 12399—ಮ್ಯೂ. 492-08-3, ಸ೯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಬನ್ನೂರು ಮ್ಯುನಿಸಿಪಾಲಿಟಿಯಲ್ಲಿ ಟರ್ನ್ ಬಡಾವಣೆಗೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜ಼ನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವದಕ್ಕೆ ಕ್ರಮ ಜರಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಯಾ ಇನಾಮಿನ ಹೆಸರು.	ಸರ್ವೆ ಯಾ ಪಸ್ಸಲೆ ನಂಬರು.	ಖಾಸಿಪ್ಕ, ತರಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಕೊಡಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.			
												ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಪಿ. ನರಸೀಪುರ	ಬನ್ನೂರು	ಬನ್ನೂರು	ಸಿದ್ದೇಗೌಡ ಬಿ. ಸಿದ್ದೇಗೌಡ.	641	ಖುಷ್ಕಿ	ಎ. ಗು. 5 27	ಎ. ಗು. 5 27	ರೂ. ಅ. ಪೈ. 4 8	ಎ. ಗು. 3 32	ರೂ. ಅ. ಪೈ. 3 0	ಜೋಳಿಗರಹಟ್ಟಿ	ಕಂಚನಹಳ್ಳಿ ರಸ್ತೆ	ಮೈಸೂರು-ಮುಳ್ಳಹಳ್ಳಿ ರಸ್ತೆ	ಸರ್ವೆ ನಂ. 642

ತಾರೀಖು 14ನೆ ಜೂ೯ 1909ನೆ ಇಸವಿ.

ನಂ. ಜ. 3889—ಪೋಲೀಸು 130-07-10, ಕ್ರಿಮಿನಲ್ ವಿಚಾರಣೆಯ ಅಧಿಕಾರವನ್ನು ಬ್ರಿಟಿಷ್ ಸರ್ಕಾರದವರಿಗೆ ಕೊಟ್ಟಿರುವ ರೈಲ್ವೆಗಳಲ್ಲಿ ಮೈಸೂರು ಸಂಸ್ಥಾನದೊಳಗೆ ಪ್ರಯಾಣಮಾಡುತ್ತಿರುವಾಗ ಪ್ರಯಾಣೀಕರು ಆಯುಧಗಳನ್ನು ತೆಗೆದು ಕೊಂಡು ಹೋಗುವ ವಿಚಾರದಲ್ಲಿ ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ರವರ ಸರ್ಕಾರದವರು ಘನವನ್ನು ಹೊಂದಿದ ಮೈಸೂರು ರೆಸಿಡೆಂಟರವರೊಡನೆ ಮಾಡಿಕೊಂಡಿರುವ ಇದರಡಿ ನಮೂದಿಸಲ್ಪಟ್ಟ ಏರ್ಪಾಟನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

(1) ಮೈಸೂರು ಆಯುಧಗಳ ರೆಗ್ಯುಲೇಷನಿನ 8 ರಿಂದ 11ರ ವರೆಗಿನ ಪ್ರಕರಣಗಳ ನಿಯಮಗಳಿಂದ ವಿನಾಯಿಸಲ್ಪಟ್ಟವರು ರೈಲ್ವೆ ಗಾಡಿಗಳಲ್ಲಿ ಪ್ರಯಾಣಮಾಡುವಾಗ ತಮ್ಮ ಆಯುಧಗಳನ್ನು ತಹಲ್ ವರೆಗೆ ಇಟ್ಟುಕೊಳ್ಳುತ್ತಿದ್ದಂತೆಯೇ ಮುಂದೆಯೂ ತಮ್ಮ ಖುದ್ದು ಸುಪರ್ದಿನಲ್ಲಿ ಇಟ್ಟುಕೊಳ್ಳಬಹುದು.

(2) ಮೈಸೂರು ಆಯುಧಗಳ ರೆಗ್ಯುಲೇಷನಿನ ಮೇರೆಗೆ ಏರ್ಪಟ್ಟ ನಿಬಂಧನೆಗಳ ಪೈಕಿ 15 ಅಥವಾ 16ನೆ ನಿಬಂಧನೆಯ ಪ್ರಕಾರ ರೈಲ್ವೆ ಗಾಡಿಗಳಲ್ಲಿ ಆಯುಧಗಳನ್ನು ಧರಿಸಿಕೊಂಡು ಹೋಗಲು ವಿಶೇಷ ಅಧಿಕಾರ ಹೊಂದಿದವರೂ ಸಹ ಮೈಸೂರು ಸಂಸ್ಥಾನದ ಸರಹದ್ದಿನೊಳಗೆ ರೈಲ್ವೆಯಲ್ಲಿ ಪ್ರಯಾಣ ಮಾಡುತ್ತಿರುವಾಗ ತಮ್ಮ ಆಯುಧಗಳನ್ನು ತಮ್ಮ ಸ್ವಾಧೀನದಲ್ಲಿಯೇ ಇಟ್ಟುಕೊಳ್ಳಬಹುದು.

(3) ಮೈಸೂರು ಆಯುಧಗಳ ರೆಗ್ಯುಲೇಷನಿನ ಮೇರೆಗೆ ಪ್ರಕಟಿಸಲ್ಪಟ್ಟ ನಿಬಂಧನೆಗಳ ಪ್ರಕಾರ IVನೆ ಅಥವಾ Vನೆ ನಮೂನೆಯಲ್ಲಿ ಲೈಸೆನ್ಸನ್ನು ಹೊಂದಿ, ಆಯುಧಧಾರಿಗಳಾಗಿ ಪ್ರಯಾಣಮಾಡಲು ಮೇಲ್ಕಂಡ (2)ನೆ ಕಲಂ ಮೇರೆಗೆ ವಿಶೇಷತಃ ಅಧಿಕಾರ ಪಡೆಯದೇ ಇರುವವರು ತಮ್ಮ ಆಯುಧಗಳನ್ನು, ಪ್ರಯಾಣೀಕರ ಸಾಮಾನುಗಳನ್ನು ಸಾಗಿಸುವ ವಿಚಾರದಲ್ಲಿ ಏರ್ಪಟ್ಟ ನಿಬಂಧನೆಗಳ ಪ್ರಕಾರ, ಸದರಿ ರೈಲ್ವೆ ಗಾಡಿಯು ಜಿಮ್ಮೆಯಲ್ಲಿರುವ ಗಾರ್ಡಿನ ವಶದಲ್ಲಿ ಇಡಬೇಕು.

ತಾರೀಖು 14ನೆ ಜೂ೯ 1909.

ನಂ. ಜ. 7064—ಜ. ಮಿ. 40-08-13, 1908ನೆ ಇಸವಿಯ ಡಿಸೆಂಬರ್ 14ನೆ ಮಕ್ಕಂ ಜ. 3590—ಜ. ಮಿ. 40-08-9ನೆ ನಂಬರ್ ಇಸ್ತಿಹಾರ್‌ನಾವೆಯೊಂದಿಗೆ ಘಾಯಿಷ್ಮಾಡೋಣವಾದ 1909ನೆ ಇಸವಿಯ ಸರ್ಕಾರೀ ಕ್ಯಾಲೆಂಡರಿನಲ್ಲಿ ನಮೂದು ಮಾಡಿರುವ 1909ನೆ ಜೂ೯ 26ನೆ ತಾರೀಖು ಶನಿವಾರಕ್ಕೆ ಬದಲಾಗಿ ಅದೇ ಮಾಹೆ 25ನೆ ತಾರೀಖು ಶುಕ್ರವಾರದ ದಿವಸ ಶ್ರೀಮದಿಂಡಿಯಾ ಚಕ್ರವರ್ತಿಯವರ ಜನ್ಮ ದಿವಸ ಮಹೋತ್ಸವವನ್ನು ನಡೆಸತಕ್ಕದ್ದೆಂದು ನಿಷ್ಕರ್ಷೆಯಾಗಿರುವುದರಿಂದ, ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಕಚೇರಿಗಳೂ, ಕೋರ್ಟುಗಳೂ, ವಿದ್ಯಾಶಾಲೆಗಳೂ ಸಹ ಸದರಿ 25ನೆ ತಾರೀಖು ಶುಕ್ರವಾರದ ದಿವಸ ಮುಚ್ಚಲ್ಪಡತಕ್ಕದ್ದು.

ತಾರೀಖು 15ನೆ ಜೂ೯ 1909ನೆ ಇಸವಿ.

ನಂ. ಜ. 7075—ಜ. ಮಿ. 124-08-9, ಮಿ॥ ಕೆ. ಎಸ್. ಚಂದ್ರಶೇಖರ ಐಯ್ಯರ್, ಬಿ. ಎ., ಬಿ. ಎಲ್., ರವರು ಚೀಫ್ ಕೋರ್ಟಿನಲ್ಲಿ ಜಡ್ಜಿಯರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರೆಗೆ, ಜನರಲ್ ಮತ್ತು ರೆವಿನ್ಯೂ ಇಲಾಖಾ ಅಂಡರ್ ಸೆಕ್ರೆಟರಿ ಮಿ॥ ಸಿ. ಎಸ್. ಬಾಲಸುಂದರಂ ಐಯ್ಯರ್, ಬಿ. ಎ., ಯವರು ಸದರಿ ಇಲಾಖಾ ಸೆಕ್ರೆಟರಿ ಕೆಲಸವನ್ನು ಬದಲಿ ನೋಡತಕ್ಕದ್ದು.

ತಾರೀಖು 15ನೆ ಜೂ೯ 1909ನೆ ಇಸವಿ.

ನಂ. ಜ. 7076—ಜ. ಮಿ. 124-08-10, 1909ನೆ ಇಸವಿ ಜೂ೯ 14ನೆ ತಾರೀಖಿನ ಮಧ್ಯಾಹ್ನದ ಮೇಲೆ ಜನರಲ್ ಮತ್ತು ರೆವಿನ್ಯೂ ಇಲಾಖಾ ಸೆಕ್ರೆಟರಿಯವರ ಕಚೇರಿಯ ಚಾರ್ಜನ್ನು ಮಿ॥ ಕೆ. ಎಸ್. ಚಂದ್ರಶೇಖರ ಐಯ್ಯರ್, ಬಿ. ಎ., ಬಿ. ಎಲ್., ರವರು ಕೊಟ್ಟರು; ಮಿ॥ ಸಿ. ಎಸ್. ಬಾಲಸುಂದರಂ ಐಯ್ಯರ್, ಬಿ. ಎ., ಯವರು ತೆಗದುಕೊಂಡರು.

ತಾರೀಖು 14ನೆ ಜೂ೯ 1909.

ನಂ. ರೆ. 10554—ಲ್ಯಾ. ರೆ. 11-08-25, ಸ೯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಹೊಸಗ್ರಾಮನತಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಚಿಕ್ಕಬಳ್ಳಾಪುರದ ಸಬ್ ಡಿವಿಜ಼ನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಯಾ ಮಾಲೀಕನ ಹೆಸರು.	ಸರ್ವೆ ಯಾ ಸೆಟ್ಲ್‌ಮೆಂಟ್ ನಂಬರು.	ಖುಷ್ಕಿ, ತರಿ ಯಾ ಬಾಗಾಯ್ತು.	ಒಟ್ಟು ವಿಸ್ತೀರ್ಣ.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ವಾಧಿಕಾರಿಗಳಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.			
											ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ ಜಿಲ್ಲೆಯ ಶಿಡ್ಲಘಟ್ಟ	ನಾದಲಿ	ಪೇಮಗಾನಹಳ್ಳಿ	(1) ನಾರಣಪ್ಪ ಬಿನ್ ಕದಿರಪ್ಪ (2) ರಾಮಕೃಷ್ಣಯ್ಯ ಅನು ಚಿನ್ನದಾಸರಾಯಣ್ಣಾವರು.	35	ಖುಷ್ಕಿ	ನ. ಗು. 4 29	ನ. ಗು. 4 29	ರೂ. ಅ. 7 0	ನ. ಗು. 4 29	ರೂ. ಅ. 7 0	ಸರ್ವೆ ನಂಬರು 202 ಮತ್ತು 203	ಗುಂಡ್ಲಹಳ್ಳಿ ಗಡಿ	ಸರ್ವೆ ನಂಬರು 34	ಸರ್ವೆ ನಂಬರು 207 ಮತ್ತು 208

ತಾರೀಖು 15ನೆ ಜೂನ್ 1909.

ನಂ. ಕೆ. 10640—ಲ್ಯಾ. ಕೆ. 11-08—22, ಸನ್ 1894ನೆ ಸಪ್ಟೆಂಬರ 7ನೆ ನಂಬರ ಲ್ಯಾಂಡ್ ಅಕ್ವಿಸಿಷನ್ 6ನೆ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಲ್ಲಿ ವಿವರಿಸಿರುವ ಪಟ್ಟಿಯಲ್ಲಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಅಂದರೆ, ಮಾಲೂರು ತಾಲ್ಲೂಕು ಹುಲಿದೇನಹಳ್ಳಿ ಕೆರೆ ಕಾಂಗಾರಿಗಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ನುಮ್ಬರ 3 (c) ಪ್ರಕಾರಂಗಳನ್ನು ನುಮಾನು ಮಾಡಿರುವ ಸರ್ವೆ ಡಿವಿಜನ್ ಚಾರ್ಜ್ ಸಬ್ಬರ್ಡಿನೇಟರವರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಕ್ರಮವು ಜರುಗಿಸಲು ಅಧಿಕಾರ ಕೊಟ್ಟಿದೆ.

| ತಾಲ್ಲೂಕು. | ಹೋಬಳಿ. | ಗ್ರಾಮ. | ಸರ್ವೆ ನಂಬರ್ ಮತ್ತು ಹಿಸ್ಸಾ ನಂಬರ್. | ಸರ್ವೆ ನಂಬರ್ ಮತ್ತು ಹಿಸ್ಸಾ ನಂಬರ್ ಪ್ರಕಾರ ಜಮೀನಿನ ವಿಸ್ತೀರ್ಣ. | | | ಜಮೀನಿನ ಮೇಲೆ ಹಕ್ಕುಳ್ಳವರ ಹೆಸರು.

ತಾರೀಖು 16ನೆ ಜೂ 1909.

ನಂ. ರೆ. 10683—ಲ್ಯಾ. ರೆ. 22-08-92, ಸ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಗ್ರಾಮ ಷಡಾವಣಿ ಬಗ್ಗಾಗಿ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಫೈಂಬ್‌ರಾಕ್ಸ್ ಸಬ್ ಡಿವಿಜ಼ನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ತಿಪ್ಪಗೊಂಡನಹಳ್ಳಿ.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮೂಲೀಕನ ಹೆಸರು.	ಸರ್ವೆ ಯಾ ಸುಭಾಷ್ ನಂಬರ್.	ಖುಷ್ಕಿ ತರಿ ಯಾ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂಡಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
												ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಹೆಗ್ಗಡದೇವನಕೋಟೆ	ಕನ್ನಂಬಾಡಿ	ನಾರಾಯಣಹಳ್ಳಿ	ಸುಬ್ಬಿಗೌಡ ಮತ್ತು ಕೋ	105	ಖುಷ್ಕಿ	ಎ. ಗು. 1 24	ಗು. 7	ಎ. ಗು. 4 17	ರೂ. ಅ. 4 0	ಎ. ಗು. 0 20	ಸೊಲೀನ್ ಬೇಲಿ	ಕೆರೆ	ಚೋಪಿ ಹೊಲ	ಸೊಲೀನ್ ಬೇಲಿ

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಥಾರ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಟೆರಿ.